ತಕ್ಕಂಥದ್ದಕ್ಕೆ ನಾವು ಹಣಕಾಸನ್ನು ಕೊಡಲೇಬೇಕಾಗುತ್ತದೆ, ಆ ಕಾರಣಕ್ಕಾಗಿಯೇ ನಾನು ಇದರ ಬಗ್ಗೆ ಪ್ರಯತ್ನಿಸಿ ಹಣವನ್ನು ಮಂಜೂರಾತಿ ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ನಿಮ್ಮ ಪ್ರಶ್ನೆಗೆ 30 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ,.. ಅಮೇಲೆ ಮಾನ್ಯ ರಘುಪತಿ ಭಟ್ ಅವರು..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ನಮ್ಮ ಪರಿಸ್ಥಿತಿ ಏನು? ಏಕೆ ಏನು ಎಂದು ನಮಗೆ ಗೊತ್ತಾಗಬೇಕಲ್ಲವೆ?

ಶ್ರೀ ಹೆಚ್.ಡಿ. ಬಸವರಾಜ್ : ಇದಕೋಸ್ಕರವೇ ಇನ್ನೊಮ್ಮೆ ಸದನವನ್ನು ಕರೆಯುತ್ತೀರಾ?

ಅಧ್ಯಕ್ಷರು : ಕಂದಾಯ ಸಚಿವರಿಗೆ ಸಂಬಂಧಪಟ್ಟಿದ್ದು ಏಕೆ ತಡವಾಯಿತು ಎಂಬುದನ್ನು ಹೇಳಿ.

Sri M.P. Prakash : The number of Bagar Hukkum cultivators to whom land has been sanctioned during the last three years and the extent of land; (taluk-wise details be furnished);

The action taken by the Government to approve the disposal of the rest of the bagar hukkum darakasthu land remaining undisposed;

Whether the bagar hukkum cultivators who had not submitted their applications earlier would be given an opportunity to submit their application now?

ಈ ತರಹ ಮೂರು ಪ್ರಶ್ನೆ ಕೇಳಿದ್ದಾರೆ. ಇಡೀ ರಾಜ್ಯದಲ್ಲಿ ತಾಲ್ಲೂಕು ವೈಸ್ ಈ ರೀತಿಯ ವರದಿ ಬರಬೇಕಾಗಿರುವುದರಿಂದ, ವರದಿಗೆ ಬರೆದಿದ್ದೇವೆ, ಅದು ಬಂದ ತಕ್ಷಣ ನಾಳೆ ಅಥವಾ ನಾಡಿದ್ದು ನಿಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಸಾರ್ ಅವರು ಕ್ವೆಶ್ಚನ್ ಇಂಗ್ಲೀಷ್‌ನಲ್ಲಿ ಕೇಳಿದ್ದಾರೋ ಅಥವಾ ಕನ್ನಡದಲ್ಲಿ ಕೇಳಿದಿರೋ?

ಶ್ರೀ ಎಂ.ಪಿ. ಪ್ರಕಾಶ್ : ಇಂಗ್ಲೀಷ್‌ನಲ್ಲಿ ಕೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ಏಕೆಂದರೆ ಇಲ್ಲಿ ಕನ್ನಡದಲ್ಲಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಂಗ್ಲೀಷ್‌ನಲ್ಲಿ ಕೇಳಲಿಲ್ಲ ನಾವು ಕನ್ನಡದಲ್ಲಿ ಕೇಳಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು. ನನ್ನ ಹತ್ತಿರ ಇದ್ದುದ್ದು ಇಂಗ್ಲೀಷ್‌ನಲ್ಲಿ ಇತ್ತು ಅದಕ್ಕಾಗಿ ಅದನ್ನು ಓದಬೇಕಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಷ್ಟು ದಿವಸಗಳಾಗಬಹುದು ಎಂಬುದನ್ನು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್ ಅವರ ಕ್ಷಮೆ ಕೇಳಿ ನಾನು ಅದನ್ನು ಬರೆದಿರುವುದನ್ನು ಓದಿದ್ದೇನೆ, ಕನ್ನಡದಲ್ಲಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇವರು ಕನ್ನಡದಲ್ಲಿ ಕೇಳಿದಿರೋ ಇಂಗ್ಲೀಷ್‌ನಲ್ಲಿ ಕೇಳಿದಿರೋ ಎಂದು ನಾನು ತಮ್ಮನ್ನು ಕೇಳಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಕನ್ನಡದಲ್ಲಿಯೇ ಕೇಳಿರುವುದು.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಮಾನ್ಯ ಪ್ರಕಾಶ್ ಅವರಿಗೆ ಇಂಗ್ಲೀಷ್ ವ್ಯಾಮೋಹ ಇದೆ ಎಂದು ಕಾಣುತ್ತೆ.

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲ ಇಲ್ಲ. ಇದರಲ್ಲಿ ಇತ್ತು ಎನ್ನುವುದಕ್ಕಾಗಿಯೇ ಓದಿದ್ದು ಅಷ್ಟೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೋಗಲಿ ಎಷ್ಟು ಸಮಯ ಬೇಕು ಎಂಬುದನ್ನಾದರೂ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಒಂದು ವಾರದೊಳಗಾಗಿ ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ರಘುಪತಿ ಭಟ್ ಅವರೇ ನಿಮ್ಮ ಪ್ರಶ್ನೆಗೂ ಕೂಡ 30 ದಿನಗಳ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ. ರಘುಪತಿ ಭಟ್ : ನನ್ನದು ಬಹಳ ಪ್ರಾಮುಖ್ಯವಾದ ಪ್ರಶ್ನೆ, 94 ಸಿ ಇದರಲ್ಲಿ.

ಅಧ್ಯಕ್ಷರು : ಸಮಯ ಕೇಳಿದ್ದಾರೆ.

ಶ್ರೀ ಆರ್. ಅಶೋಕ್ : ರಾಜ್ಯಾವಾರು ಪೂರ್ತಿ ವರದಿ ತರಿಸಿಕೊಳ್ಳುವುದು ಇದರಲ್ಲಿ ಏನೂ ಇಲ್ಲ. ಬಹಳ ಸಿಂಪಲ್ಲಾಗಿದೆ ಪ್ರಶ್ನೆ ಬೇಕಾದರೆ ನೋಡಿ. ಸರ್ಕಾರದ ಗಮನಕ್ಕೆ ಬಂದಿದೆಯೇ? ಅರ್ಜಿ ಸಲ್ಲಿಸಿದವರಿಗೆ ನ್ಯಾಯ ಒದಗಿಸುತ್ತೀರಾ ಎಂದು ಕೇಳಿದ್ದಾರೆ.

ಅಧ್ಯಕ್ಷರು : ಗ್ರಾಮಾಂತರ ಪ್ರದೇಶದಲ್ಲಿರುವ ಅತಿಕ್ರಮಣದಾರರಿಗೆ ಪುನಃ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆಗೆ ಅವಕಾಶಕ್ಕೆ ಸಂಬಂಧಪಟ್ಟಂತೆ ಉತ್ತರ ನೀಡುವ ಸಲುವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆಯಬೇಕಾಗುತ್ತದೆ, ಅದ್ದರಿಂದ ಸಮಯ ಬೇಕಾಗುತ್ತದೆ. ಆ ಕಾರಣದಿಂದ ಸಮಯ (30) ದಿನಗಳ ಕಾಲ ಬೇಕು ಎಂದು ಕೇಳಿದ್ದಾರೆ.

ಶ್ರೀ ಆರ್. ಅಶೋಕ್ : ರಾಜ್ಯವಾರು ಮಾಹಿತಿ ಏಕೆ ಬೇಕು? ಅವಕಾಶವನ್ನು ಕೊಡುತ್ತೇವೆಂದು ಉತ್ತರ ಹೇಳಿ ಬಿಟ್ಟರೆ ಈ ಪ್ರಶ್ನೆ ಮುಗಿದು ಹೋಗುತ್ತದೆ, ಇದು ತುಂಬಾ ಸರಳವಾದ ಪ್ರಶ್ನೆ, ಈಗ ಯಾರ್ಯಾರು 94ಸಿ ಪ್ರಕಾರ ಮನೆ ಕಟ್ಟಿಕೊಂಡು ಒಂದು ಕಡೆ ಏನು ಅರ್ಜಿ ಸಲ್ಲಿಸಿದ್ದಾರೆ, ಯಾರ್ಯಾರು ಅರ್ಜಿ ಸಲ್ಲಿಸಿದ್ದಾರೆ ಅವರಿಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರಷ್ಟೇ ಕೊಡುತ್ತೇವೆ ಎಂದರೆ ಈ ಪ್ರಶ್ನೆ ಮುಗಿದೆ ಹೋಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದು ಬೇಕೋ ಬೇಡವೇ ನೀವೇ ನೋಡಿ.

ಶ್ರೀ ಎಂ.ಪಿ. ಪ್ರಕಾಶ್ : ಅವರ ಪ್ರಶ್ನೆ (ಅ) ನಲ್ಲಿ ಕೇಳಿರುವಂತೆ ಆ ಕಾರಣಕ್ಕಾಗಿ ನಮಗೆ ಎಷ್ಟು ಅರ್ಜಿ ಬಂದಿದೆ? 94–ಸಿ ಕೆಳಗೆ ಅರ್ಜಿಗೆ ಅರ್ಹರಾಗಿರತಕ್ಕಂಥ ಜನ ಮನೆ ಕಟ್ಟಿಸಿರುವವರು ಎಷ್ಟು ಇದ್ದಾರೆ? ಈ ಪ್ರಾಥಮಿಕ ಮಾಹಿತಿಯನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. ಆ ಕಾರಣಕ್ಕಾಗಿ.. ಏನು ಬಿದ್ದು ಹೋಗುವುದಿಲ್ಲ, ಸಮಯ ನಾನು ಒಂದು ವಾರ ಕೇಳಿದ್ದೇನೆ ಅಷ್ಟೆ.

ಶ್ರೀ ಹೆಚ್.ಡಿ. ಬಸವರಾಜ್ : ಇದರಲ್ಲಿ ಸ್ಪಷ್ಟತೆ ಏನಿದೆ ಎಂದರೆ, ಇವರು ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿದ್ದಾರೆ, ಇದರಲ್ಲಿ ಅರ್ಜಿ ಸಲ್ಲಿಸದೇ ಇರುವವರು ...

ಅಧ್ಯಕ್ಷರು : ಅಯಿತು ಈಗ ಅವರು ಕಾಲವಕಾಶ ಕೇಳಿದ್ದಾರೆ. ಕಾಲಾವಕಾಶವನ್ನು ಕೇಳಿರುವುದರಿಂದ....

ಶ್ರೀ ಆರ್. ಅಶೋಕ್ : ಎಲ್ಲಾ ಪ್ರಶ್ನೆ ಹೀಗೆ ಪೋಸ್ಟ್‌ಪೋನ್ ಮಾಡುತ್ತಿದ್ದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮೊನ್ನೆ ಬಿಎಸಿ ಮೀಟಿಂಗ್‌ನಲ್ಲಿ ನಾನು ಈ ವಿಷಯ ಪ್ರಸ್ತಾಪಿಸಿದ್ದೆ. ಏನಾಗಿದೆ ಎಂದರೆ, ಸಣ್ಣ ಪುಟ್ಟ ಮಾಹಿತಿ ಬೇಕಿದ್ದರೂ ಅದರ ಬಗ್ಗೆ ಕೂಡ ಕಾಲಾವಧಿಯನ್ನು

ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರದ ಅಧಿಕಾರಿಗಳು ಮಾಡುತ್ತಿದ್ದಾರೆಂದು ಹೇಳಿದ್ದೆ. ಇದು ತುಂಬಾ ಸಣ್ಣ ಪುಟ್ಟ ಮಾಹಿತಿ ಇದೆ. ಅರ್ಜಿ ಕೊಡದೇ ಇದ್ದವರ ಮಾಹಿತಿ ತೆಗೆಯುವುದು, ಅರ್ಜಿ ಎಷ್ಟು ಕೊಟ್ಟಿದ್ದಾರೆ ಎನ್ನುವ ಮಾಹಿತಿ ಇದ್ದರೆ ಮುಗಿದು ಹೋಯಿತು, ಅಷ್ಟು ಮಾಹಿತಿ ಒದಗಿಸಲಿಕ್ಕೆ ಆಗುವುದಿಲ್ಲ, ಎಂದರೆ ಏನು?

ಶ್ರೀ ಎಂ.ಪಿ. ಪ್ರಕಾಶ್ : ಬಸವನೆಂದೂಡೆ ಪಾಪ ಎಂದು ಅಲ್ಲಿಗೆ ಟರ್ನ್ ಆಗುತ್ತೀರಿ, ಮುಂದೆ ದಶಗೆಟ್ಟು ಪೋಪದು ಎಂದು ಕೇಳುವುದಿಲ್ಲ.

11.40 ಪಿ.ಎಂ

ಶ್ರೀ ಎಂ.ಪಿ. ಪ್ರಕಾಶ್ : (ಮುಂದು)

ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ 176 ತಾಲ್ಲೂಕುಗಳಿಂದ ಮಾಹಿತಿ ಸಂಗ್ರಹ ಮಾಡಬೇಕಾಗಿದೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ...

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರು ಎಲ್ಲಾ ಮಾಹಿತಿಗಳನ್ನು ವಿವರವಾಗಿ ಪಡೆದು ಸಂಬಂಧಪಟ್ಟಂಥ ಸದಸ್ಯರಿಗೆ ಒದಗಿಸಿಕೊಡುತ್ತಾರೆ. ಆದ್ದರಿಂದ ದಯಮಾಡಿ ಎಲ್ಲರು ಸಹಕರಿಸಿ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ...

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಮಾಹಿತಿ ತರಿಸಿಕೊಡತಕ್ಕಂಥದ್ದು ಇದರಲ್ಲಿ ಏನಿಲ್ಲ. ಅರ್ಜಿ ಕೊಡದಿರುವವರು ಇನ್ನೂ ಅನೇಕ ಜನರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ನಿರ್ಧಾರ ತಿಳಿಸಿದರೆ ಸಾಕು.

ಅಧ್ಯಕ್ಷರು : ಎಷ್ಟೆಷ್ಟು ಜನ ಅರ್ಜಿ ಹಾಕಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ತರಿಸಬೇಕಾಗಿದೆ.

ಶ್ರೀ ಹೆಚ್.ಡಿ. ಬಸವರಾಜ್ : ಈಗ ಅರ್ಜಿ ಹಾಕುವವರಿಗೆ ಇನ್ನು ಮುಂದೆ ಅವಕಾಶ ಕೊಡುತ್ತೇವೆ ಎಂದು ಹೇಳಿದರೆ ಸಾಕು. ಆದ್ದರಿಂದ ಇದರ ಬಗ್ಗೆ ಸರ್ಕಾರದ ನಿರ್ಧಾರವನ್ನು ಹೇಳಿದರೆ ಬಡವರಿಗೆ ತುಂಬಾ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆದಷ್ಟು ಬೇಗ ಮಾಹಿತಿ ತರಿಸುವುದಕ್ಕೆ ಹೇಳುತ್ತೇನೆ. ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಮಾನ್ಯ ಬಸವರಾಜ್‌ರವರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇನ್ನು ಒಂದು ವಾರದಲ್ಲಿ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವರಾಜ್‌ರವರೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಧಿವೇಶನ ಮುಂದುವರೆದ ದಿವಸಗಳಲ್ಲಿ ಪ್ರಶ್ನೋತ್ತರ ವೇಳೆಗೆ ಅವಕಾಶವಿರುವುದಿಲ್ಲ. ಆದ್ದರಿಂದ, ಇದಕ್ಕಿಂಥ ಮೊದಲು ನನ್ನ ಪ್ರಶ್ನೆಗೆ ಉತ್ತರವನ್ನು

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ವೈಯಕ್ತಿಕವಾಗಿ ಪತ್ರವನ್ನು ಬರೆದು ಕಳುಹಿಸುತ್ತೇವೆ. ಒಂದು ವೇಳೆ ಬರುವ ವಾರದೊಳಗೆ ಮಾಹಿತಿ ಬಂದ ತಕ್ಷಣವೇ ಮಾನ್ಯ ಸದಸ್ಯರನ್ನು ಕರೆಸಿ ಆ ಮಾಹಿತಿಯನ್ನು ಕೊಡುತ್ತೇವೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮಾಹಿತಿ ತರಿಸಿ ಕೊಡುವುದಕ್ಕಿಂತ ಈಗ ಅರ್ಜಿ ಹಾಕುವುದಕ್ಕೆ ಅವಕಾಶ ಕಲ್ಪಿಸಿ ಕೊಡುತ್ತೇವೆಂದು ಹೇಳಿದರೆ ಸಾಕು.

ಅಧ್ಯಕ್ಷರು : ಮಾನ್ಯ ಅಶೋಕ್‌ರವರೆ, ತಾವು ದಯಮಾಡಿ ಕುಳಿತುಕೊಳ್ಳಿ. ಪ್ರಶ್ನೋತ್ತರ ಪ್ರಾರಂಭವಾಗಿ ಈಗಾಗಲೇ ಸಾಕಷ್ಟು ಸಮಯವಾಗಿದೆ.

ಶ್ರೀ ಆರ್. ಅಶೋಕ್ : ಹೊಸದಾಗಿ ಅರ್ಜಿ ಹಾಕುವವರಿಗೆ ಅವಕಾಶ ಕೊಟ್ಟರೆ ಈ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ ಬಗ್ಗೆ

66(242) : ಶ್ರೀ ಬಸವರಾಜು ಹೆಚ್. ಡಿ. (ವೀರಾಜಪೇಟೆ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿನಾಂಕ 31–3–2004ರವರೆಗೆ ಅಬಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣ ಎಷ್ಟು; (ಲಕ್ಷಕ್ಕೂ ಮೇಲ್ಪಟ್ಟವರ ಸಂಪೂರ್ಣ ವಿವರ ನೀಡುವುದು)

ಆ) ಈ ಬಾಕಿ ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ ಮೂರು ವರ್ಷಗಳಿಂದ ಬರಬೇಕಾಗಿರುವ ವರ್ಷಾವಾರು ಬಾಕಿ ಹಣ ಎಷ್ಟು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ರೂ. 630.40 ಕೋಟಿಗಳು ಇರುತ್ತದೆ. (ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ)

ಆ) ಬಾಕಿ ಹಣವನ್ನು ವಸೂಲು ಮಾಡಲು ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.

1. ಇಲಾಖೆಯಿಂದ ತೀವ್ರಗತಿಯಲ್ಲಿ ವಸೂಲಿ ಮಾಡಲು ನಿಯಮಾನುಸಾರ ಕ್ರಮ ಜರುಗಿಸಲಾಗಿದೆ.
2. ಭೂ ಕಂದಾಯ ಕಾಯಿದೆಯ ಅನ್ವಯ ಕ್ರಮ ಜರುಗಿಸಲಾಗಿದೆ.

ಇ) (ಕೋಟಿ ರೂ.ಗಳಲ್ಲಿ)

ವರ್ಷ	ಆಸಲು	ಬಡ್ಡಿ	ಒಟ್ಟು
2000–01	2.66	1.66	4.32
2001–02	111.96	26.37	138.34
2002–03	14.68	1.51	16.18
ಒಟ್ಟು	**129.30**	**29.54**	**158.84**